O.S.No. 637/2010 PW.1

**ದಿಃ 04-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : 4 ನೇ ಪ್ರತಿವಾದಿ ಪರ ವಕೀಲರವರಿಂದ:**

4 ನೇ ಪ್ರತಿವಾದಿ ನನ್ನ ಗಂಡನ ಅಣ್ಣನಾಗಬೇಕು. 1 ನೇ ಪ್ರತಿವಾದಿ ನನ್ನ ಮಾವ ಅಂದರೆ ನನ್ನ ಗಂಡನ ತಂದೆ. 2, 3 ಮತ್ತು 5 ನೇ ಪ್ರತಿವಾದಿಯರು ನನ್ನ ಗಂಡನ ಸಹೋದರರು. 4 ನೇ ಪ್ರತಿವಾದಿ ಈ ದಾವೆಯಲ್ಲಿನ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದನು ಎಂದರೆ ಸರಿ.

ಓ.ಎಸ.ನಂ. 17/2009 ರ ದಾವೆಯನ್ನು ನಾವೇ ಸಲ್ಲಿಸಿದ್ದೆವು. ನನ್ನ ಗಂಡ ದಿಃ 24.09.2008 ರಂದು ತೀರಿಕೊಂಡಿರುತ್ತಾನೆ. 2 ನೇ ಪ್ರತಿವಾದಿ ಓ.ಎಸ.ನಂ. 439/2005 ರಂತೆ ದಾವೆ ದಾಖಲಿಸಿದ್ದನು ಎಂದರೆ ಸರಿ. ಸದರಿ ದಾವೆ ನನ್ನ ಗಂಡನ ವಿರುದ್ಧ ಮತ್ತು 3 ರಿಂದ 5 ನೇ ಪ್ರತಿವಾದಿಯರ ವಿರುದ್ಧ ದಾಖಲಿಸಿದ್ದನು ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ಗಂಡನ ಪಾಲಿಗೆ ಮತ್ತು 3 ಪ್ರತಿವಾದಿಯ ಪಾಲಿಗೆ ಜಂಟಿಯಾಗಿ ರಿ.ಸ.ನಂ. 179/2 ರಲ್ಲಿ 2 ಎಕರೆ 19 ಗುಂಟೆ ಮತ್ತು ರಿ.ಸ.ನಂ. 194 ರಲ್ಲಿ 2 ಎಕರೆ 02 ಗುಂಟೆ ಬಂದಿರುತ್ತದೆ ಎಂದರೆ ಸರಿ. ನನ್ನ ಗಂಡ ತೀರಿ ಹೋದ ನಂತರ ರಿ.ಸ. ನಂ. 179/2 ಮತ್ತು ರಿ.ಸ.ನಂ. 194 ರಲ್ಲಿ ನನ್ನ ಹಿಸ್ಸೆಯನ್ನು ಓ.ಎಸ.ನಂ. 709/2008 ರಲ್ಲಿ ಬಿಟ್ಟು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಓ.ಎಸ.ನಂ. 709/2008 ರಲ್ಲಿನ ಡಿಕ್ರಿ ಸರಿ ಇರುವುದಿಲ್ಲ.

ನನ್ನ ಗಂಡನಿಗೆ ನಾನೊಬ್ಬಳೇ ಹೆಂಡತಿ ಇರುತ್ತೇನೆ. ನಾನು ಈಗ ದುರದುಂಡಿ ಗ್ರಾಮದಲ್ಲಿ ವಾಸ ಮಾಡುತ್ತಿದ್ದು ಉಪ್ಪಾರಹಟ್ಟಿ ಗ್ರಾಮಕ್ಕೆ ಹೋಗವುದು ಬರುವುದು

ಮಾಡುತ್ತೇನೆ. 2008 ರಿಂದ ನಾನು ದುರದುಂಡಿ ಗ್ರಾಮದಲ್ಲಿಯೇ ವಾಸ ಮಾಡುತ್ತಿದ್ದೇನೆ ಎಂದರೆ ಸರಿ. ಓ.ಎಸ.ನಂ. 709/2008 ರಲ್ಲಿನ ಆದೇಶವನ್ನು ಪ್ರಶ್ನಿಸಿ ನಾನು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಓ.ಎಸ.ನಂ.709/2008 ನ್ನು 5 ನೇ ಪ್ರತಿವಾದಿ ದಾಖಲಿಸಿದ್ದನು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾನು, 2 ನೇ ಪ್ರತಿವಾದಿ, ಲಕ್ಕವ್ವಾ 3 ನೇ ಪ್ರತಿವಾದಿ, ರಂಗಪ್ಪಾ ಪ್ರತಿವಾದಿಯರಾಗಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾನು 5 ನೇ ಪ್ರತಿವಾದಿಯಾಗಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನನ್ನ ಪರವಾಗಿ ಎಂ.ಎ.ಪಿರಜಾದೆ ವಕೀಲರು ಹಾಜರಾಗಿದ್ದರು ಎಂದರೆ ಸಾಕ್ಷಿಯು ನಮ್ಮ ಎದುರು ಪಕ್ಷದವರ ಪರವಾಗಿ ಪಿರಜಾದೆ ವಕೀಲರು ಹಾಜರಾಗಿದ್ದರು ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ನೀಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

Sd/-

ಪ್ರ.ದಿ.&ನ್ಯಾದಂ., ಗೋಕಾಕ.